**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.276/2018**

**ಪಿಡಬ್ಲ್ಯೂ-1**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹಾದೇವ |
| ತಂದೆಯ ಹೆಸರು | - | ಕರೀಗೌಡ |
| ವಯಸ್ಸು | - | 46 |
| ಕೆಲಸ | - | ವ್ಯವಸಾಯ |
| ವಾಸ | - | ಗಂಧನಹಳ್ಳಿ |

**ದಿನಾಂಕ 03-03-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ನನ್ನ ಹೆಂಡತಿ. ದಿ:29.07.2017 ರಂದು ಅಧಿಕಾರಿಗಳು ನಮ್ಮ ಜಾಗವನ್ನು ಅಳತೆ ಮಾಡುತ್ತಿದ್ದರು. ಆಗ 1ನೇ ಆರೋಪಿ ಇವರು ನಮ್ಮ ಜಾಗ ಇಲ್ಲಿಯವರೆಗೆ ಇದೆ ಅಲ್ಲಿ ಗುರುತು ಮಾಡಬೇಡಿ ಎಂದು ಹೇಳಿ ಜಗಳ ತೆಗೆದರು. ಆಗ ನಾನು ಅಧಿಕಾರಿಗಳು ಅಳತೆ ಮಾಡುತ್ತಿದ್ದಾರೆ ತಡೆ ಮಾಡಬೇಡಿ ಸುಮ್ಮನಿರಿ ಎಂದು ಹೇಳಿದೆ. ಆಗ 1ನೇ ಆರೋಪಿ ಇವರು ಬೋಳಿ ಮಗನೇ ಇಲ್ಲಿಯವರೆಗೂ ಏನು ಇದೆ ಎಂದು ಹೇಳಿ ಜಗಳ ತೆಗೆದರು. ಆಗ ಗಣೇಶ ಎನ್ನುವವರು ನನ್ನನ್ನು ತಬ್ಬಿ ಹಿಡಿದುಕೊಂಡಾಗ 1ನೇ ಆರೋಪಿ ಇವರು ದೊಣ್ಣೆಯಿಂದ ನನ್ನ ಎಡಬುಜಕ್ಕೆ ಹೊಡೆದರು. ನಂತರ ಅಭಿ ಎನ್ನುವವರು ನನ್ನನ್ನು ಕೆಳಕ್ಕೆ ಹಾಕಿ ತುಳಿದರು. ಆಗ ಚಾಸಾ 2 ರವರು ಗಲಾಟೆ ಬಿಡಿಸಲು ಸ್ಥಳಕ್ಕೆ ಬಂದರು. ಆಗ ಆರೋಪಿ 2 ರವರು ಚಾಸಾ 2 ರವರ ತಲೆಯ ಜುಟ್ಟನ್ನು ಹಿಡಿದು ಹೊಡೆದರು.

ಚಾಸಾ 3 ರವರು ಜಗಳ ಬಿಡಿಸಿ ಸಮಾದನ ಪಡಿಸಿದರು. ನಂತರ ಚಾಸಾ 3 ರವರು ನಮ್ಮನ್ನು ಸಾಲಿಗ್ರಾಮ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ನಗರ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು ಅಲ್ಲಿಂದ ಮುಂದುವರೆದ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋದೆವು. ನಮ್ಮ ಗ್ರಾಮದಲ್ಲಿ ಪಂಚಾಯತಿ ಮಾಡಿ ರಾಜಿ ಮಾಡುವುದಾಗಿ ಹೇಳಿದ್ದರಿಂದ ಹಾಗೂ ನಂತರ ರಾಜಿ ಆಗದೇ ಇರುವಾಗ ನಾನು ತಡವಾಗಿ ದೂರನ್ನು

ನೀಡಿರುತ್ತೆನೆ. ಸಾಕ್ಷಿಗೆ ತೋರಿಸಿದ ದಾಖಲೆಯ ಮೇಲೆ ತಮ್ಮ ಸಹಿ ಇರುವುದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರು ಆಗಿದ್ದು ಅದನ್ನು ನಿಪಿ 1 ಎಂದು ಹಾಗೂ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ವಸ್ತುವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮೂಮಾ 1 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸ್ವತಃ ಗಣೇಶ್, ಅಭಿಶೇಕ್, ಮರೀಗೌಡ ಹಾಗೂ ಮಂಜುನಾಥ್ ಇವರು ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಸಾಕ್ಷಿ ಮುಂದುವರೆದು ಇನ್ನು 4 ಜನ ವ್ಯಕ್ತಿಗಳು ತನ್ನ ಮೇಲೆ ಹಲ್ಲೆ ಮಾಡಿರುವುದಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಎಪಿಪಿ ಯವರು ಸದರಿ ವ್ಯಕ್ತಿಗಳನ್ನು ಹೆಚ್ಚುವರಿ ಆರೋಪಿಗಳಾಗಿ ಪ್ರಕರಣದಲ್ಲಿ ಸೇರಿಸಲು ಅರ್ಜಿ ಸಲ್ಲಿಸಲು ಕೋರಿದ್ದರಿಂದ ಸಮಯ ನೀಡಲಾಯಿತು.**

ಮರು ವಿಚಾರಣೆ -ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ